# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | |
|---|---|---|
| ಹೆಸರು | : ಬಸವರಾಜ ಬಗಲಿ | ಫ್ರಾಸಾ-9 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ-20 |
| ವರ್ಷ | : 60 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ಬೀಳಗಿ | |

ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ಪಾರ್ವತಿ, ಮೃತ ನಾಗಪ್ಪ ನನಗೆ ಗೊತ್ತು. ಚಾಸಾ-16/ರಾಜೇಂದ್ರ ನನಗೆ ಗೊತ್ತು. ಚಾಸಾ-16 ರವರು ನಾಗರಾಳ ಗ್ರಾಮದಲ್ಲಿ ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆ ನಡೆಸುತ್ತಿದ್ದಾರೆ. ಮೃತ ನಾಗಪ್ಪ ಸದರಿ ಶಾಲೆಯಲ್ಲಿ ರಾತ್ರಿ ವೇಳೆ ವಾಚಮನ್ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದರು.

2. ದಿಃ 12.01.2025 ರಂದು ಚಾಸಾ-1 ರವರ ಗಂಡ ನಾಗಪ್ಪ ಹಲ್ಲೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ನಮ್ಮ ಓಣಿಯಲ್ಲಿ ಮಾತನಾಡಿಕೊಳ್ಳುತ್ತಿದ್ದು, ನಂತರ ನಾನು ಮತ್ತು ಚಾಸಾ-1 ರವರು ಕೂಡಿ ಬೀಳಗಿ ಪೊಲೀಸ ಠಾಣೆಗೆ ಭೇಟಿ ನೀಡಿ ಚಾಸಾ-1 ರವರು ಹೇಳಿದಂತೆ ದೂರನ್ನು ಬರೆದಿರುತ್ತೇನೆ. ನಂತರ ಸದರಿ ದೂರನ್ನು ಚಾಸಾ-1 ರವರು ದಾಖಲಿಸಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಚಾಸಾ-1 ರವರ ನಿಪಿ-1 ದೂರಿನ ಮೇಲೆ ಅವರ ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆ.

**ಪಾಟೀ ಸವಾಲುಃ** ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ

ದೂರನ್ನು ದಾಖಲಿಸಲು ಠಾಣೆಗೆ ಹೋಗಿದ್ದಾಗ ಚಾಸಾ–17 ರವರು ಸಹ ಠಾಣೆಗೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ–17 ರವರು ಹೇಳಿದಂತೆ ನಿಪಿ–1 ದೂರನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ದೂರನ್ನು ದಾಖಲಿಸಲು ಠಾಣೆಗೆ ಹೋಗಿದ್ದಾಗ

ಸಮಯ ಸುಮಾರು ಬೆಳಿಗ್ಗೆ 10−30 ಗಂಟೆ ಆಗಿರಬಹುದು. ಚಾಸಾ−1 ರವರು ಹೇಳಿದಂತೆ ನಾನು ನಿಪಿ−1 ದೂರನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | | |
|---|---|---|---|
| ಹೆಸರು | : | ರಾಜೇಂದ್ರ ದೇಶಪಾಂಡೆ | ಫ್ರಾಸಾ-8 |
| ತಂದೆಯ ಹೆಸರು | : | ಶ್ಯಾಮರಾವ | ಚಾಸಾ-16 |
| ವರ್ಷ | : | 59 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ನಾಗರಾಳ ಹಾಲಿ ವಸತಿ ವಿದ್ಯಾಗಿರಿ, ಬಾಗಲಕೋಟೆ | |

ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನಮಗೆ ಸೇರಿದ ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆ ನಾಗರಾಳದಲ್ಲಿರುವ ನಮ್ಮ ಜಾಗದಲ್ಲಿ ಸನ್ 2009 ರಿಂದ ನಡೆಸುತ್ತಿದ್ದೇನೆ. ಚಾಸಾ-17/ಶಿವಾನಂದ ನಮ್ಮ ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾಗಪ್ಪ ನಮ್ಮ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದು, ನಮ್ಮ ಶಾಲೆ ಪ್ರಾರಂಭಿಸಿದ ನಂತರ ಶಾಲೆಯಲ್ಲಿ ವಾಚಮನ್ ಅಂತಾ ಕೆಲಸ ಮಾಡುತ್ತಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಆತನನ್ನು ದಿಃ 18.12.2024 ರಂದು ಮಕ್ಕಳಿಗೆ ನವೋದಯ ಮತ್ತು ಮುರಾರ್ಜಿ ದೇಸಾಯಿ ಕೋಚಿಂಗ್ ಕೊಡಿಸುವ ಸಲುವಾಗಿ ಕರೆಸಿಕೊಂಡಿದ್ದೆನು.

2. ದಿಃ 11.01.2025 ರಂದು ಶನಿವಾರ ಇದ್ದು, ಶಾಲೆ ಮುಗಿದ ನಂತರ ಕೆಲವು ಹುಡುಗರು ಊರಿಗೆ ಹೋಗಿದ್ದು, ಮೃತ ನಾಗಪ್ಪ, ಆರೋಪಿ ಮತ್ತು 4-5 ಜನ ಹುಡುಗರು ಮಾತ್ರ ವಸತಿ ಶಾಲೆಯಲ್ಲಿ ಉಳಿದುಕೊಂಡಿದ್ದರು.

3. ದಿಃ 12.01.2025 ರಂದು ಬೆಳಿಗ್ಗೆ 7-20 ಗಂಟೆಗೆ ಆರೋಪಿ/ಧನರಾಜ ತನ್ನ ಮೊಬೈಲ ನಂ. 8951598214 ದಿಂದ ನನ್ನ ಮೊಬೈಲ ನಂ. 9611520076 ಗೆ ಕರೆ ಮಾಡಿ, ಬೆಳಿಗ್ಗೆ ಸುಮಾರು 6-30 ಗಂಟೆಗೆ ಮಕ್ಕಳಿಗೆ ನೀರು ಕಾಯಿಸುವ ವಿಚಾರವಾಗಿ ಮತ್ತು ವಿದ್ಯುತ್ ದೀಪಗಳನ್ನು ಆರಿಸದೆ

ಇರುವ ವಿಚಾರವಾಗಿ ಆತನಿಗೂ ಮತ್ತು ನಾಗಪ್ಪನಿಗೂ ಜಗಳವಾಗಿದ್ದು, ಆತನು ಕಟ್ಟಿಗೆಯಿಂದ ನಾಗಪ್ಪನಿಗೆ ಹೊಡೆದಿದ್ದರಿಂದ ಪೆಟ್ಟಾಗಿ ಮೂರ್ಚೆ ಬಿದ್ದಿರುತ್ತಾನೆ, ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ನನಗೆ ತಿಳಿಸಿರುತ್ತಾನೆ. ನಂತರ ನಾನು ಸದರಿ ವಿಚಾರವಾಗಿ ಚಾಸಾ-1, ಚಾಸಾ-13, ಚಾಸಾ-17 ರಿಂದ 19 ರವರಿಗೆ ತಿಳಿಸಿ ಸ್ಥಳಕ್ಕೆ ಹೋಗುವಂತೆ ತಿಳಿಸಿರುತ್ತೇನೆ. ನಂತರ ನಾಗಪ್ಪನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ಮೃತಪಟ್ಟಿರುತ್ತಾನೆ ಎಂದು ತಿಳಿದುಬಂದಿತು. ನಂತರ ನಾನು ಆಸ್ಪತ್ರೆಯಲ್ಲಿ ನಾಪ್ಪನ ಮೃತದೇಹ ನೋಡಿದಾಗ ಆತನ ತಲೆಗೆ ತೀವ್ರವಾದ ಪೆಟ್ಟಾಗಿತ್ತು. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿತ್ತಾರೆ.

4. ದಿಃ 05.03.2026 ರಂದು ಬೀಳಗಿ ಪೊಲೀಸರು ನನಗೆ ನೋಟಿಸ ಕೊಟ್ಟು ನಮ್ಮ ಶಾಲೆಯಲ್ಲಿ ಆರೋಪಿ ಮತ್ತು ಮೃತ ನಾಗಪ್ಪ ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲಾತಿಗಳನ್ನು ಪೂರೈಸುವಂತೆ ಕೋರಿಕೊಂಡಿರುತ್ತಾರೆ. ಸಾಕ್ಷಿ ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸದರಿ ಕೋರಿಕೆ ಪತ್ರಕ್ಕೆ ನಾನು ನಮ್ಮ ಶಾಲೆಯ ಪರವಾಗಿ ಪ್ರತಿಉತ್ತರ ಕೊಟ್ಟು, ಆರೋಪಿ ನಮ್ಮ ಶಾಲೆಯ ಖಾಯಂ ನೌಕರ ಆಗಿಲ್ಲದೆ ಇರುವರಿಂದ ಹಾಜರಾತಿ ಪುಸ್ತಕ ಇರುವುದಿಲ್ಲ ಮತ್ತು ನೇಮಕಾತಿ ಪತ್ರ ಇರುವುದಿಲ್ಲ ಎಂದು ಉತ್ತರ ಕೊಟ್ಟಿರುತ್ತೇನೆ. ಮೃತ ನಾಗಪ್ಪ ತೋಳಮಟ್ಟಿ ನಮ್ಮ ಶಾಲೆಯ ಸಿಬ್ಬಂದಿ ಆಗಿರುವುದಿಲ್ಲ, ಆದರೆ ನಮ್ಮಲ್ಲಿ ಸುಮಾರು ವರ್ಷಗಳಿಂದ ಹೊಲದ ಕೆಲಸ ಮಾಡಿಕೊಂಡು ಬರುತ್ತಿದ್ದು, ರಾತ್ರಿ ವೇಳೆಯಲ್ಲಿ ಶಾಲೆಯ ಪಕ್ಕದ ಶೆಡ್ ನಲ್ಲಿ ಇರುತ್ತಿದ್ದನು ಎಂದು ತಿಳಿಸಿರುತ್ತೇನೆ. ನಮ್ಮ ಶಾಲೆಯ ನೊಂದಣಿಗೆ ಸಂಬಂಧಿಸಿದ ದಾಖಲೆಗಳನ್ನು ಸದರಿ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಪ್ರತಿಉತ್ತರ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-15 ಎಂದು, ಶಾಲೆಗೆ ಸಂಬಂದಿಸಿದ ದಾಖಲಾತಿಗಳನ್ನು ನಿಶಾನೆ ಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-15(ಎ) ಮತ್ತು ನಿಪಿ-16(ಎ) ಎಂದು ಗುರುತಿಸಲಾಯಿತು. ನಾಗಪ್ಪನ ಸಾವಿಗೆ ಆರೋಪಿತನೆ ಕಾರಣನಾಗಿರುತ್ತಾನೆ.

.3..

**ಪಾಟೀ ಸವಾಲುಃ** ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ

ಯಾವುದೇ ಶಾಲೆ ಪ್ರಾರಂಭಿಸಬೇಕಾದರೆ ಡಿಡಿಪಿಐ ಕಚೇರಿಗೆ ಶಾಲೆಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಪೂರೈಸಬೇಕು ಎಂದರೆ ಸರಿ. ನಮ್ಮ ಜಾಗದಲ್ಲಿ ರಾಧಾಕೃಷ್ಣ ಶಾಲೆ ಇರುವ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿ ಡಿಡಿಪಿಐ ಕಚೇರಿಗೆ ಎಲ್ಲಾ ದಾಖಲಾತಿಗಳನ್ನು ಒದಗಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಶಾಲೆ ವಸತಿ ಶಾಲೆ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ನವೋದಯ ಮತ್ತು ಮುರಾರ್ಜಿ ದೇಸಾಯಿ ಶಾಲೆಗಳಿಗೆ ಭರ್ತಿ ಆಗಲು ಮಕ್ಕಳಿಗೆ ಕೋಚಿಂಗ್ ಕೊಡುತ್ತಿದ್ದಾಗ ಶಾಲೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೆವು.

2. ನಮ್ಮ ಶಾಲೆಯಲ್ಲಿ ಒಬ್ಬರು ಮುಖ್ಯೋಪಾಧ್ಯಾಯರು, 7 ಜನ ಶಿಕ್ಷಕರು ಮತ್ತು ಇಬ್ಬರು ಸಿಪಾಯಿಗಳು ಇರುತ್ತಾರೆ. ನಮ್ಮ ಸಿಪಾಯಿಗಳು ಶಾಲೆಯ ಎಲ್ಲಾ ಸ್ವಚ್ಛತೆ ನೋಡಿಕೊಳ್ಳುತ್ತಾರೆ. ಮೃತ ನಾಗಪ್ಪ ನಮ್ಮ ಶಾಲೆಯಲ್ಲಿ ವಾಚಮನ್ ಅಂತಾ ಕೆಲಸ ಮಾಡುತ್ತಿರಲಿಲ್ಲ ಆದರೆ ರಾತ್ರಿ ವೇಳೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ನಮ್ಮ ಶಾಲೆಯ ಪಕ್ಕದಲ್ಲಿರುವ ಶೆಡ್ ನಲ್ಲಿ ಇರುತ್ತಿದ್ದರು.

3. ಆರೋಪಿ ನನಗೆ ಪೋನ ಮಾಡಿರುತ್ತಾನೆ ಎಂದು ಹೇಳಿದಾಗ ನಾನು ಬಾಗಲಕೋಟೆಯಲ್ಲಿ ಇದ್ದೆ. ನಾನು ವಿಷಯ ತಿಳಿದ ನಂತರ ಸುನಗ ಕ್ರಾಸ್ ಬಳಿ ಹೋಗುತ್ತಿದ್ದಾಗ ಮೃತ ನಾಗಪ್ಪನನ್ನು ಅಂಬ್ಯುಲೆನ್ಸನಲ್ಲಿ ಸಾಗಿಸುತ್ತಿದ್ದನ್ನು ನೋಡಿ, ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

4. ಆರೋಪಿಯನ್ನು ನಮ್ಮ ಶಾಲೆಯ ಆಡಳಿತಾಧಿಕಾರಿ ಎಂದು ನೇಮಕಾ ಮಾಡಬೇಕು ಎಂದು ಅಂದುಕೊಂಡಿದ್ದೆವು. ಈ ಕಾರಣದಿಂದ ಚಾಸಾ-17 ರವರಿಗೆ ಆರೋಪಿಯನ್ನು ಕಂಡರೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ನಾಗಪ್ಪ ತಾನಾಗಿಯೆ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಮೃತಪಟ್ಟಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 12.01.2025 ರಂದು ಆರೋಪಿ ನನಗೆ ಕರೆ ಮಾಡಿರುವುದಿಲ್ಲ ಮತ್ತು ಆತನಿಗೂ ಮತ್ತು ನಾಗಪ್ಪನಿಗೆ ಜಗಳವಾಗಿದ್ದು, ಕಟ್ಟಿಗೆಯಿಂದ ಹೊಡೆದ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ಹನಮಂತ ಮಾದರ, ಚಿದಾನಂದ ಮಾದರ, ಮಲ್ಲಿಕಾರ್ಜುನ ಮತ್ತು ಸಿದ್ದಾರ್ಥ ಹಾಗೂ ಇನ್ನಿಬ್ಬರು ಮಕ್ಕಳು ಸದರಿ ದಿನ ನಮ್ಮ ಶಾಲೆಯಲ್ಲಿ ನವೋದಯ ಮತ್ತು ಮೊರಾರ್ಜಿ ದೇಸಾಯಿ ಕೋಚಿಂಗ ವಿಚಾರವಾಗಿ ಶಾಲೆಯಲ್ಲಿ ಉಳಿದುಕೊಂಡಿರುತ್ತಾರೆ. ನಮ್ಮ ಶಾಲೆಯಲ್ಲಿ ನವೋದಯ ಮತ್ತು ಮೊರಾರ್ಜಿ ದೇಸಾಯಿ ಕೋಚಿಂಗ ಇರುವ ಯಾವುದೇ ಪ್ಯಾಂಪ್ಲೆಟಗಳನ್ನು ಮಾಡಿಸಿರುವುದಿಲ್ಲ. ಆರೋಪಿ

ನಮ್ಮ ಶಾಲೆಯಲ್ಲಿ ಮೋರಾರ್ಜಿ ದೇಸಾಯಿ ಮತ್ತು ನವೋದಯ ಕೋಚಿಂಗ ವಿಚಾರವಾಗಿ ಆಡಳಿತಾಧಿಕಾರಿ ಅಂತಾ ನೇಮಕಗೊಂಡಿದ್ದರು ಎಂದರೆ ಸರಿಯಲ್ಲ. ಘಟನೆ ಆಗಿದೆ ಎಂದು ಹೇಳುವ ದಿನ ನಾನು ಪೊಲೀಸ ಠಾಣೆಗೆ ಹೋಗಿರುವುದಿಲ್ಲ. ದಿಃ 12.01.2025 ರಂದು ಪೊಲೀಸರು ನನ್ನನ್ನು ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | |
|---|---|---|
| ಹೆಸರು | : ಗಣೇಶ ತೋಳಮಟ್ಟಿ | ಫ್ರಾಸಾ-7 |
| ತಂದೆಯ ಹೆಸರು | : ನಾಗಪ್ಪ | ಚಾಸಾ-13 |
| ವರ್ಷ | : 24 ವರ್ಷ | |
| ಉದ್ಯೋಗ | : ಚಾಲಕ | |
| ವಿಳಾಸ | : ಬೀಳಗಿ | |

ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ನಾಗಪ್ಪ ನನ್ನ ತಂದೆ. ಚಾಸಾ-1/ಪಾರ್ವತಿ ನನ್ನ ತಾಯಿ. ಚಾಸಾ-14/ಮಲ್ಲಪ್ಪ ನನ್ನ ಅಣ್ಣ. ಚಾಸಾ-16/ರಾಜೇಂದ್ರ, ಚಾಸಾ-17/ಶಿವಾನಂದ, ಚಾಸಾ-18/ಆನಂದ, ಚಾಸಾ-19/ಮುತ್ತುರಾಜ, ಚಾಸಾ-20/ಬಸವರಾಜ ನನಗೆ ಗೊತ್ತು.

2. ನನ್ನ ತಂದೆ ಚಾಸಾ-16/ರಾಜೇಂದ್ರ ದೇಶಪಾಂಡೆ ರವರಿಗೆ ಸೇರಿದ ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಾಚಮನ್ ಅಂತಾ ಕೆಲಸ ಮಾಡುತ್ತಿದ್ದರು. ಅದೇ ಶಾಲೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ವಸತಿ ಮಕ್ಕಳಿಗೆ ಮುರಾರ್ಜಿ ದೇಸಾಯಿ ಪರೀಕ್ಷಾ ತರಬೇತಿ ನೀಡುತ್ತಿದ್ದರು.

3. ದಿಃ 12.01.2025 ರಂದು ಬೆಳಿಗ್ಗೆ ಸುಮಾರು 7-30 ಗಂಟೆಗೆ ನಾನು, ನನ್ನ ತಾಯಿ ಚಾಸಾ-1 ಮತ್ತು ಚಾಸಾ-14 ರವರು ಮನೆಯಲ್ಲಿದ್ದಾಗ ಚಾಸಾ-16 ರವರು ಕರೆ ಮಾಡಿ ಶಾಲೆಯಲ್ಲಿ ಆರೋಪಿ ಧನರಾಜ ಮತ್ತು ನನ್ನ ತಂದೆಯ ಮಧ್ಯ ಮಕ್ಕಳಿಗೆ ನೀರು ಕಾಯಿಸುವ ವಿಚಾರವಾಗಿ ಜಗಳವಾಗಿದ್ದು, ಆರೋಪಿ ನನ್ನ ತಂದೆಗೆ ತಲೆಗೆ ಬಡಿಗೆಯಿಂದ ಹೊಡೆದಿದ್ದರಿಂದ ಪ್ರಜ್ಞೆ ತಪ್ಪಿಸ್ಥಳದಲ್ಲಿ ಬಿದ್ದಿರುತ್ತಾರೆ ಅವರನ್ನು ತಕ್ಷಣವೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ನಮಗೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ಚಾಸಾ-16 ರವರಿಗೆ ಆರೋಪಿ ಕರೆ ಮಾಡಿ ತಿಳಿಸಿರುತ್ತಾನೆ.

4. ನಂತರ ನಾನು, ನನ್ನ ತಾಯಿ ಚಾಸಾ-1, ಚಾಸಾ-14 ಮತ್ತು ಚಾಸಾ-15 ರವರೆಲ್ಲರೂ ರಾಧಾಕೃಷ್ಣ ಶಾಲೆಯ ಪಕ್ಕದಲ್ಲಿದ್ದ ಶೆಡ್ ಬಳಿ ಹೋಗಿ ನೋಡಿದಾಗ ನನ್ನ ತಂದೆಯ ತಲೆಗೆ ತೀವ್ರವಾದ ಗಾಯವಾಗಿದ್ದು, ಪ್ರಜ್ಞೆ ಇಲ್ಲದೆ ನೆಲದ ಮೇಲೆ ಬಿದ್ದಿದ್ದರು. ಆ ಸಮಯದಲ್ಲಿ ಚಾಸಾ-17/ಶಿವಾನಂದ, ಚಾಸಾ-18/ಆನಂದ, ಚಾಸಾ-19/ಮುತ್ತುರಾಜ ರವರು ಸಹ ಸ್ಥಳದಲ್ಲಿ ಇದ್ದರು. ನಂತರ ಅಂಬ್ಯುಲೆನ್ಸನ್ನು ಸ್ಥಳಕ್ಕೆ ಕರೆಯಿಸಿ ನನ್ನ ತಂದೆಯನ್ನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ನನ್ನ ತಂದೆಯನ್ನು ಪರೀಕ್ಷೆ ಮಾಡಿ ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ನಂತರ ಅದೇ ಅಂಬ್ಯುಲೆನ್ಸನಲ್ಲಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ಜಿಲ್ಲಾ ಆಸ್ಪತ್ರೆಯ ವೈದ್ಯರು ನನ್ನ ತಂದೆಯನ್ನು ಪರೀಕ್ಷಿಸಿ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನನ್ನ ತಂದೆಯ ಶವವನ್ನು ಶವಾಗಾರಕ್ಕೆ ಸಾಗಿಸಲಾಯಿತು. ಅದೇ ದಿನ ಶವಾಗಾರದಲ್ಲಿ ನನ್ನ ತಂದೆಯ ಶವದ ಮೇಲೆ ಪಂಚನಾಮೆ ಜರುಗಿಸಲಾಯಿತು. ಸಾಕ್ಷಿ ಸದರಿ ಶವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಿಪಿ-5 ಪಂಚನಾಮೆ ಕಾಲಕ್ಕೆ ತೆಗೆದ ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-13 ಎಂದು ಗುರುತಿಸಲಾಯಿತು. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನನ್ನ ತಂದೆ ಸಾವಿಗೆ ಆರೋಪಿತನೆ ಕಾರಣನಾಗಿರುತ್ತಾನೆ.

**ಪಾಟೀ ಸವಾಲುಃ**ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ

ನಾವು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಂಬ್ಯುಲೆನ್ಸ ಇನ್ನೂ ಬಂದಿರಲಿಲ್ಲ. ಅಂಬ್ಯುಲೆನ್ಸನ್ನು ಸ್ಥಳಕ್ಕೆ ಬರಮಾಡಿಕೊಳ್ಳಲು ಚಾಸಾ-17 ರವರು ಕರೆ ಮಾಡಿರುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದಾಗ ನನ್ನ ತಂದೆ ಬೋರಲಾಗಿ ಬಿದ್ದಿದ್ದರು. ನಾವು ಸ್ಥಳಕ್ಕೆ ಹೋಗುವವರೆಗೂ ನನ್ನ ತಂದೆಯನ್ನು ಯಾರೂ ಮುಟ್ಟಿರಲಿಲ್ಲ. ನಾವು ಬೀಳಗಿ ಆಸ್ಪತ್ರೆಗೆ ಹೋದಾಗ ಸಮಯ ಸುಮಾರು 8 ಗಂಟೆ ಆಗಿರಬಹುದು. ಬೀಳಗಿ ಆಸ್ಪತ್ರೆಯಲ್ಲಿ ವೈದ್ಯರಿಗೆ ನನ್ನ ತಂದೆ ಮೇಲೆ ಹಲ್ಲೆ ಆದ ವಿಚಾರ ತಿಳಿಸಿರುತ್ತೇನೆ. ಬೀಳಗಿ ಆಸ್ಪತ್ರೆಯಲ್ಲಿ ನನ್ನ ತಂದೆಗೆ ಪ್ರಥಮ ಚಿಕಿತ್ಸೆ ಕೊಟ್ಟು ತಕ್ಷಣವೆ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ಮತ್ತೊಮ್ಮೆ ನಾನು ಘಟನಾ ಸ್ಥಳಕ್ಕೆ ನಾನು ಪುನಃ ಹೋಗಿರುವುದಿಲ್ಲ. ಚಾಸಾ-17/ಶಿವಾನಂದ ಅಸ್ಕಿ ರವರು ಘಟನೆ ಬಗ್ಗೆ

ಹೇಳಿದ ಪ್ರಕಾರ ನನ್ನ ತಾಯಿ ದೂರನ್ನು ದಾಖಲಿಸಿರುತ್ತೇವೆ. ನಾನು ದೂರನ್ನು ದಾಖಲಿಸುವ ಕಾಲಕ್ಕೆ ಪೊಲೀಸ ಠಾಣೆಗೆ ಹೋಗಿರಲಿಲ್ಲ.

3. ನನ್ನ ತಂದೆ ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರಿಗೆ ದಿನಗೂಲಿ ಆಧಾರದ ಮೇಲೆ ಸಂಬಳ ಕೊಡುತ್ತಿದ್ದರು. ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನನ್ನ ತಂದೆ ಏನು ಕೆಲಸ ಮಾಡುತ್ತಿದ್ದರು ಎಂದು ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ನನ್ನ ತಂದೆ ಒಲೆಯ ಪಕ್ಕದಲ್ಲಿ ಬಿದ್ದಿದ್ದರು ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ಬಿದ್ದಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯ ಶವವನ್ನು ಪೊಲೀಸರು ನಮಗೆ ಸಂಜೆ ಸುಮಾರು 6-30 ಗಂಟೆ ನಂತರ ಕೊಟ್ಟಿರುತ್ತಾರೆ. ಆರೋಪಿ ನನಗೆ ವೈಯಕ್ತಿಕವಾಗಿ ಪರಿಚಯ ಇರುವುದಿಲ್ಲ, ಆದರೆ ರಾಧಾಕೃಷ್ಣ ಶಾಲೆಯಲ್ಲಿ ನೋಡಿರುತ್ತೇನೆ.

4. ನನ್ನ ತಂದೆಗೆ ಹೆಚ್ಚಾಗಿ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮದ್ಯಪಾನ ಮಾಡಿ ಕಾಲುಎಡವಿ ಕಲ್ಲಿನ ಮೇಲೆ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನಿಗೂ ಮತ್ತು ನನ್ನ ತಂದೆಗೂ ಯಾವುದೇ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ರಾಧಾಕೃಷ್ಣ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಾಚಮನ ಅಂತಾ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-16 ರವರು ನಮಗೆ ಕರೆ ಮಾಡಿ ನನ್ನ ತಂದೆ ಮೇಲೆ ಹಲ್ಲೆ ಆದ ವಿಚಾರ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-17 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .